ದಿನಾಂಕ: ಜನವರಿ 21, 2014

# ಸ್ಥಿರತೆ ವಿರುದ್ಧ ಅತಂತ್ರ ಪರಿಸ್ಥಿತಿ

-ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಕಳೆದ ವಾರವು ಕಲಿಕಾ ಅನುಭವದ ಕಾಲವಾಗಿತ್ತು. ದೇಶದ ಮೂರು ವಿವಿಧ ನಾಯಕರು ಭಾರತದ ಕುರಿತು ಹೊಂದಿರುವ ದೂರದೃಷ್ಟಿತ್ವವನ್ನು ನಿಕಟವಾಗಿ ಗಮನಿಸುವ ಅವಕಾಶ ನನಗೆ ಲಭಿಸಿತು.

ಎಐಸಿಸಿ ಸಭೆ ಉದ್ದೇಶಿಸಿ ರಾಹುಲ್ ಗಾಂಧಿ ಮಾಡಿದ ಭಾಷಣ ಪಕ್ಷದ ಕಾರ್ಯಕರ್ತರ ಮನೋಬಲ ಹೆಚ್ಚಿಸುವ ಉದ್ದೇಶ ಹೊಂದಿತ್ತು. ಅವರು ದಿಕ್ಕಾಪಾಲಾಗಿದ್ದಾರೆ. ಪ್ರಸ್ತುತ ಸನ್ನಿವೇಶದಲ್ಲಿ ಪ್ರಧಾನ ಮಂತ್ರಿ ಅಭ್ಯರ್ಥಿ ಘೋಷಣೆ ಮಾಡದ ಪಕ್ಷದ ನಿಲವಿನಿಂದ ಕಾರ್ಯಕರ್ತರು ಮಾನಸಿಕ ಹಿಂಜರಿಕೆ ಅನುಭವಿಸುತ್ತಿದ್ದಾರೆ. ಅವರ ಭಾಷಣ ಆಕ್ರಮಣಕಾರಿಯಾಗಿತ್ತು ಅದರೆ ಅದರಲ್ಲಿ ನಿಖರತೆ ಇರಲಿಲ್ಲ.

ಭಾಜಪ ರಾಷ್ಟ್ರೀಯ ಪರಿಷತ್ ಉದ್ದೇಶಿತ ನರೇಂದ್ರ ಮೋದಿ ಭಾಷಣ ನಿರರ್ಗಳವಾಗಿತ್ತು. ಅವರ ರಾಜಕೀಯ ನಿಲವು ಅಲ್ಲದೆ, ಭಾರತದ ಕುರಿತು ಸಕಾರಾತ್ಮಕ ದೂರದೃಷ್ಟಿತ್ವವನ್ನು ಬಿಚ್ಚಿಡಲು ಅವರು ಈ ಸಂದರ್ಭವನ್ನು ಬಳಸಿಕೊಂಡರು. ಚರ್ಚೆಯ ಮಟ್ಟ ಹೆಚ್ಚಿಸಿದರು. ಪ್ರಧಾನ ಮಂತ್ರಿಗೆ ಯೋಗ್ಯ ಭಾಷಣ ಅದಾಗಿತ್ತು. ಒಕ್ಕೂಟ ವ್ಯವಸ್ಥೆಗೆ ಒತ್ತು ನೀಡಿದ ಅವರು, ಆಧುನಿಕ ಮತ್ತು ಬಲಿಷ್ಠ ಭಾರತದ ನಿರ್ಮಾಣಕ್ಕೆ ತಮ್ಮ ಮುಂದಾಲೋಚನೆಗಳನ್ನು ಅನಾವರಣಗೊಳಿಸಿದ್ದರು. ಕೃಷಿ ಕ್ಷೇತ್ರದಿಂದ ಮೊದಲುಗೊಂಡು ಶಿಕ್ಷಣ ಮತ್ತು ಆರೋಗ್ಯ ರಕ್ಷಣೆವರೆಗೂ ಸಕಾರಾತ್ಮಕ ಆಲೋಚನೆಗಳನ್ನು ಅವರು ಹಂಚಿಕೊಂಡರು. ಪ್ರತಿಯೊಂದು ರಾಜ್ಯದಲ್ಲೂ ಐಐಟಿ, ಐಐಎಂ ಹಾಗೂ ಎಐಐಎಮ್‌ಎಸ್ ನಂತಹ ಉತ್ಕೃಷ್ಟ ಉನ್ನತ ಶಿಕ್ಷಣ ಸಂಸ್ಥೆಗಳಿರಬೇಕು. ಎಲ್ಲಾ ಮನೆಗಳು ಮೂಲ ಸೌಕರ್ಯಗಳನ್ನು ಪಡೆದಿರಬೇಕು. ಸುವರ್ಣ ಚತುಷ್ಪಥವನ್ನು ವಜ್ರ ಶ್ರೇಣಿಯ ಚತುಷ್ಪಥಕ್ಕೆ ಏರಿಸಿ ಆ ಮೂಲಕ ಹೆದ್ದಾರಿಗಳು, ಕೈಗಾರಿಕಾ ಸಮುಚ್ಚಯಗಳು ಮತ್ತು ಬುಲೆಟ್ ಟ್ರೇನ್ ಒಳಗೊಂಡ 100 ಸುಸಜ್ಜಿತ ನಗರಗಳನ್ನು ನಿರ್ಮಿಸಿದರೆ ಭಾರತದ ಚಹರೆಯನ್ನೇ ಬದಲಾಯಿಸಬಹುದು. ಸಂಪನ್ಮೂಲಗಳನ್ನು ಪಡೆಯುವ ಮೊದಲ ಹಕ್ಕು ಬಡವರಿಗೆ ಮತ್ತು ವಂಚಿತರಿಗೆ ಸಲ್ಲಬೇಕು. ಭಾಜಪ ಮತ್ತು ನರೇಂದ್ರ ಮೋದಿಯವರು ಕೈಗೊಳ್ಳುವ 2014ರ ಪ್ರಚಾರಾಂದೋಲನಕ್ಕೆ ಅವರ ಭಾಷಣ ಪ್ರಮುಖ ಘಟ್ಟವಾಗಿದೆ.

ಮೂರನೆಯದಾಗಿ ಎಎಪಿ ರಾಜಕಾರಣ. ಸಾಂಪ್ರದಾಯಿಕ ರಾಜಕಾರಣವನ್ನು ವಿರೋಧಿಸಿ ಹುಟ್ಟಿದ ಪಕ್ಷ ಅದಾಗಿದೆ. ಪರ್ಯಾಯ ರಾಜಕಾರಣದ ಭರವಸೆ ನೀಡಿದ ಪಕ್ಷವದು. ಆದರೆ ಪರ್ಯಾಯ ರಾಜಕಾರಣ ಕೇವಲ ಅರಾಜಕತ್ವವೆಂದು ಈಗ ಸ್ಪಷ್ಟವಾಗುತ್ತಿದೆ. ಎಎಪಿ ನಾಯಕರು ಇದನ್ನು ಒಪ್ಪಿದ್ದಾರೆ. ಅವರ ಪ್ರಜಾನೀತಿ ಗೊಂದಲದಿಂದ ಕೂಡಿದೆ. ಲೋಕಪಾಲ್ ಚಳುವಳಿ ನಡೆದ ಸಂದರ್ಭದಲ್ಲಿ, ಕೇಂದ್ರ ಸರ್ಕಾರದ ರಕ್ಷಣಾ ಕವಚವಾಗಿ ವರ್ತಿಸುವ ಸಿಬಿಐ ಕೇಂದ್ರ ಸರ್ಕಾರದ ನಿಯಂತ್ರಣದಿಂದ ಮುಕ್ತವಾಗಬೇಕು ಎಂದು ವಾದಿಸಲಾಗುತ್ತಿತ್ತು. ಆದರೆ ಇಂದು ಅದೇ

ನಾಯಕರು ರಾಜ್ಯ ಪೋಲಿಸ್ ನಿಯಂತ್ರಣವು ದೆಹಲಿಯ ಚುನಾಯಿತ ಪ್ರತಿನಿಧಿಗಳ ವಶದಲ್ಲಿರಬೇಕು ಎಂದು ವಾದಿಸುತ್ತಿದ್ದಾರೆ. ಈ ನಾಯಕರ ಹೇಳಿಕೆಗಳಲ್ಲಿ ಸಭ್ಯತೆಯಿಲ್ಲ. ಅವರು ಕಾನೂನು ನಿಯಮಗಳನ್ನು ಗೌರವಿಸುತ್ತಿಲ್ಲ(ಮಳವೀಯ ನಗರದಲ್ಲಿ), ರಾಜಕೀಯ ಸಾಹಸ, ಅತಿಯಾದ ದುರಹಂಕಾರ, ಸಾರ್ವಜನಿಕ ಭಾಷಣಗಳಲ್ಲಿ ಸಭ್ಯತೆಯ ಕೊರತೆ ಮತ್ತು ಅಸ್ತಿತ್ವದಲ್ಲಿರುವ ಸಂಸ್ಥೆಗಳ ಕುರಿತು ಅನಾದರ ತೋರುತ್ತಿದ್ದಾರೆ. ಸಮವಸ್ತ್ರ ಕಳಚಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವಂತೆ ಪೋಲಿಸರಿಗೆ ಮನವಿ ಮಾಡುತ್ತಿದ್ದಾರೆ. ಗಣರಾಜ್ಯೋತ್ಸವ ಬಹಿಷ್ಕರಿಸುವಂತೆ ಮೂಲವಾದಿ ಸಂಘಟನೆಯೊಂದು ಎರಡು ದಶಕಗಳ ಹಿಂದೆ ಕರೆ ನೀಡಿತ್ತು. ಇಂದು ಅವಿರೋಧ ರಾಷ್ಟ್ರೀಯ ಪಕ್ಷವಾಗಿ ಹೊರಹೊಮ್ಮುವ ಆಕಾಂಕ್ಷೆ ಬೆಳೆಸಿಕೊಂಡ ಒಂದು ಪಕ್ಷ ಗಣರಾಜ್ಯೋತ್ಸವಕ್ಕೆ ಧಕ್ಕೆವುಂಟುಮಾಡುವ ಬೆದರಿಕೆ ಹಾಕಿದೆ. ಸಂವಿಧಾನಕ್ಕೆ ಅವರ ನಡತೆ ಸವಾಲಾಗಿ ಪರಿಣಮಿಸಿದೆ. ಜಮ್ಮು-ಕಾಶ್ಮೀರದ ಪ್ರತ್ಯೇಕತಾವಾದಿಗಳು ಮತ್ತು ಛತ್ತೀಸಗಡ್‌ದ ಮಾವೋವಾದಿಗಳು ಅದರ ಸದಸ್ಯರಾಗಿದ್ದಾರೆ.

ಅರಾಜಕತೆಯ ಒಕ್ಕೂಟವೆಂಬ ಪದಪುಂಜವನ್ನು ರಾಜ್ಯಸಭೆಯಲ್ಲಿ ಕಳೆದ ವರ್ಷ ಬಳಸಿದಾಗ, ಪ್ರಸ್ತುತ ನಿಬಂಧನೆಗಳಿಂದ ಮುಕ್ತ, ವೈಯಕ್ತಿಕ ವಾದಕ್ಕೆ ಅಂಟಿಕೊಂಡು ಅರಾಜಕತೆ ಮೂಡಿಸುವ ಮಂದಿ ಒಕ್ಕೂಟ ಸ್ಥಾಪಿಸಲು ಸಾಧ್ಯವೆ ಎಂಬ ಸಂದೇಹ ನನ್ನದಾಗಿತ್ತು. ಅದಕ್ಕೆ ಈಗ ಉತ್ತರ ಲಭಿಸಿದೆ. ದೆಹಲಿಯ ಬೀದಿಗಳಲ್ಲಿ ಅರಾಜಕತೆಗೆ ಕಾರಣಕರ್ತರ ಪ್ರದರ್ಶನ ನಡೆದಿದೆ. ಅರಾಜಕತೆ ಪರ್ಯಾಯ ರಾಜಕಾರಣವಾಗಲು ಸಾಧ್ಯವಿಲ್ಲ.